Reg. No. | | | | | | | | | |

# BCAKAL 153/BSAKAL 153/BFDKAL 155/ BGDKAL 155/BIDKAL 155

**Credit Based II Semester B.C.A./B.Sc. (Animation and Visual Effects) / B.Sc. (Fashion Design) / B.Sc. (Garment Design) / B.Sc. (Interior Design and Decoration) Examination, April/May 2017**
**(Common to All Batches) (New Scheme)**
**KANNADA LANGUAGE**
**Kannada/Advanced Kannada**

Time : 3 Hours                                                                 Max. Marks : 80

## ಭಾಗ – 1 (ಕಾವ್ಯ)

I. ಅ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ''ವಿವೇಚನೆಯಿಲ್ಲದೆ ಕೈಗೊಳ್ಳುವ ಕಾರ್ಯ ಹಿತವನ್ನುಂಟು ಮಾಡುವುದಿಲ್ಲ''–ಈ ಮಾತನ್ನು ಕೈಕೆಯಿ ಪಾತ್ರದ ಮೂಲಕ ಸ್ಪಷ್ಟಪಡಿಸಿ.

2) ದಾಸಿಮಯ್ಯನ ವಚನಗಳಲ್ಲಿ ಕಂಡುಬರುವ ವಿಚಾರಗಳೇನು ? ವಿವರಿಸಿರಿ.

ಆ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ. **(1×5=5)**

1) ಕೃಷ್ಣ ಈರುಳ್ಳಿಯನ್ನು ಸೃಷ್ಟಿ ಮಾಡಲು ಕಾರಣವೇನು ? ತಿಳಿಸಿರಿ.

2) ಹೆಣ್ಣಿನ ತವರಿನ ಹಂಬಲ ಜನಪದ ಗೀತೆಯಲ್ಲಿ ಹೇಗೆ ವ್ಯಕ್ತವಾಗಿದೆ ?

ಇ) ಎರಡಕ್ಕೆ ಟಿಪ್ಪಣಿ ಬರೆಯಿರಿ : **(2×3=6)**

1) ಮಾಲತಿ ಪಟ್ಟಣಶೆಟ್ಟಿ

2) ಮಾನವನ ಆಸೆ

3) ಅಪರಾಜಿತೆ.

Shri Dharmasthala Manjunatheshwara College of Business Management MANGALORE - 575 003

II. ಅ) ಒಂದು ಪದ್ಯಭಾಗದ ಸಂದರ್ಭ ಸೂಚಿಸಿ, ಮಹತ್ವವನ್ನು ವಿವೇಚಿಸಿರಿ. **(1×5=5)**

1) ಏನನಿದಂ ನೆನೆದೈ ಸುತ
ಕಾನನಮಂ ಪೋಗಿ ಪೊಕ್ಕು ಮಂಗಳಗೀತ
ಧ್ವಾನಮಿರೆ ಸಿಂಹಶರಭ
ಧ್ವಾನಮನಾಲಿಸುವ ಮಹಿಮೆಗರ್ತಿಗನಾದೈ

P.T.O.

2) ಬಂದ ಸುಖವನು ಬಿಡದೆ ಬರದುದ ಬೇಕೆನದೆ
ದಂದುಗಂ ಬಿಡದೆ ಮನದೆಚ್ಚರವ ಬಿಡದೆ
ಸಂದುದನದೇಕೆನದೆ ಮುಂದದೇಂ ಗತಿಯೆನದೆ
ಹೊಂದಿಕೊಲೊ ಬಂದುದಕೆ-ಮರುಳ ಮುನಿಯ.

ಆ) ಎರಡು ಸಾಲುಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿಶದಪಡಿಸಿರಿ. **(2×3=6)**

1) ಕತ್ತೆ ಬಲ್ಲುದೇ ಕತ್ತುರಿಯ ವಾಸನೆಯ
2) ಸುಗುಣಂ ಮಾನಕಷಾಯಕ್ಕೆ ತಕ್ಕನೆಡೆಗೊಟ್ಟಪನೇ ?
3) ನನ್ನ ಜಡೆಮುಡಿ ಕಟ್ಟುವ ಕನಸು ನನಸಾಗದಿಲ್ಲ.

III. ಕೆಳಗಿನ ಪ್ರಶ್ನೆಗಳಲ್ಲಿ ಪ್ರತಿಯೊಂದಕ್ಕೂ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. **(5×1=5)**

1) ದಾಸಿಮಯ್ಯನ ವೃತ್ತಿ ಯಾವುದು ?
2) ಪಾಂಡವರು ಅಜ್ಞಾತವಾಸವನ್ನು ಪೂರೈಸಿದ್ದು ಎಲ್ಲಿ ?
3) ಚಿ. ಉದಯಶಂಕರ್ ಅವರನ್ನು 'ಕನ್ನಡದ ಕಣ್ಣದಾಸನ್' ಎಂದು ಕರೆದವರು ಯಾರು ?
4) 'ಸೂರ್ಯ ಮುಳುಗುವುದಿಲ್ಲ' – ಇದು ಯಾರ ಕೃತಿ ?
5) ನಾಗಚಂದ್ರನ ಜನ್ಮಸ್ಥಳ ಯಾವುದು ?

## ಭಾಗ - 2 (ಗದ್ಯ)

IV. ಅ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ಜಲಪ್ರೇತ ಹಾಗೂ ಕಾರಂತರ ಸಂಭಾಷಣೆಯ ಸ್ವಾರಸ್ಯವನ್ನು ಬರೆಯಿರಿ.
2) ಭಾರತೀಯ ಮನಸ್ಸಿನ ಆಧ್ಯಾತ್ಮದ ನಿತ್ಯಸತ್ಯವನ್ನು ತೋಳ್ಪಾಡಿಯವರು ಹೇಗೆ ಪರಿಚಯಿಸಿದ್ದಾರೆ ? ವಿವರಿಸಿ.

ಆ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ಪುರುಷ ದೌರ್ಜನ್ಯದ ವಿರುದ್ಧ ಹೋರಾಟ ನಡೆಸಿದ ಭವ್ರೀದೇವಿಯವರ ವ್ಯಕ್ತಿತ್ವವನ್ನು ಚಿತ್ರಿಸಿರಿ.
2) ನಾ. ಡಿಸೋಜರ ಪ್ರಕೃತಿ ಪ್ರೇಮವನ್ನು ವಿವೇಚಿಸಿರಿ.

V. ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ. **(1×5=5)**

1) ಏಣಗಿ ಬಾಳಪ್ಪನವರ ವ್ಯಕ್ತಿತ್ವವನ್ನು ಪರಿಚಯಿಸಿರಿ.
2) ಗಾಂಧೀಜಿಯವರು ಆರಂಭಿಕ ಹಂತದಲ್ಲಿ ಮೈಗೂಡಿಸಿಕೊಂಡ ಅಂಶಗಳು ಯಾವುವು ?

VI. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. **(4×1=4)**

1) ಕೊಡೈಕನಾಲಿನಲ್ಲಿ 12 ವರ್ಷಗಳಿಗೊಮ್ಮೆ ಅರಳುವ ಹೂವು ಯಾವುದು ?
2) ವೇದವ್ಯಾಸರ ತಾಯಿ ಯಾರು ?
3) 'ಜೋಗಿ'ಯವರ ನಿಜ ನಾಮಧೇಯವೇನು ?
4) 'ಈಗೇನ್ ಮಾಡಿರಿ' – ಇದು ಯಾರ ಆತ್ಮಕಥೆ ?

## ಭಾಗ - 3 (ನಾಟಕ)

VII. ಅ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ. (1×8=8)

1) ವಿಶ್ವಾಮಿತ್ರನನ್ನು ವಸಿಷ್ಠರು ಬ್ರಹ್ಮರ್ಷಿಯೆಂದು ಒಪ್ಪಿಕೊಂಡ ಸಂದರ್ಭದ ಹಿನ್ನೆಲೆಯನ್ನು ವಿವೇಚಿಸಿರಿ.

2) ಅಂಧ್ರಕನ ಸಾವು ಹೇಗಾಯಿತು ? ವಿವರಿಸಿರಿ.

ಆ) ಕೆಳಗಿನವುಗಳಲ್ಲಿ ಒಂದು ಪ್ರಶ್ನೆಗೆ ಉತ್ತರಿಸಿರಿ. (1×6=6)

1) ಶುನಶ್ಶೇಫನ ಪಾತ್ರವನ್ನು ಪರಿಚಯಿಸಿರಿ.

2) ಹರಿಶ್ಚಂದ್ರನಿಗೆ ಜಲೋದರ ರೋಗ ಬರಲು ಕಾರಣವೇನು ? ಅದು ಪರಿಹಾರವಾದ ಬಗೆ ಹೇಗೆ ? ತಿಳಿಸಿರಿ.

VIII. ಎರಡು ವಾಕ್ಯಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿಶದಪಡಿಸಿರಿ. (2×2=4)

1) ಇಡೀ ಆಶ್ರಮದ ನೈತಿಕತೆಯ ಪ್ರಶ್ನೆ ಇಲ್ಲಿದೆ.

2) ನಾನೀಗ ವರುಣನ ಸ್ವತ್ತು.

3) ಪಶುಘಾತವಾಗದೆ ಯಜ್ಞ ಸಮಾಪ್ತಿಯಾಗಬೇಕು.

Shri Dharmasthala Manjunatheshwara
College of Business Management Library
MANGALORE - 575 003

IX. ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರಿಸಿರಿ. (2×1=2)

1) ಗೋತ್ರ ಪ್ರವರ್ತಕನೆಂದು ಯಾರನ್ನು ಕರೆಯುತ್ತಾರೆ ?

2) ತ್ರಿಶಂಕು ಕುಮಾರ ಯಾರು ?